ಹೆಣ್ಮಕ್ಕೆಲ್ಲ 'ಏ ಯಕ್ಕಾ, ಗುಡಿಮ್ಯಾಲ ಪೂಜಾರಿ, ಗುರಯ್ಯ ಮುತ್ಯಾ ಬಂದಾರ' ಅಂತ್ಹೇಳಿ ತ್ಯಾಪ್ಯಾಕಿದ ಸೀರಿ ಸೆರಗ ತೆಲಿಮ್ಯಾಲ ಹಾಕೊಂಡು ದಗ್ದಕ್ ಹೊತ್ತಾಗ್ಯಾದಂತ ನಡದ್ರು.

ಜಗಲಿ ಮ್ಯಾಲ ದೀಪ ಹಚ್ಚಿದ ಸಾಮವ್ವ 'ಯಪ್ಪ ಪೂಜಾರಿ! ಯಾಕ್ ಸವಾರಿ ಈಕಡಿ ಬಂದಾದ್ರಿ...?' ಅಂದಳು. ದೋತ್ರ ಕಚ್ಚಿ ಸರಿ ಮಾಡ್ಕೊತ ಕ್ವಾರಿ ಮೀಸಿ ಮ್ಯಾಲ ಕೈಯಾಡ್ಸಗೊತ್ ನಿಂಗಪ್ಪ ಪೂಜಾರಿ 'ಎಲ್ಲಿಬೆ.. ಸಾಮವ್ವ ನಿನ್ ಗಂಡ' ಎಂದ. 'ಯಪ್ಪ ಇಲ್ಲೇ ಬಚ್ಚಲ್ ಕಟ್ಟಿಗಿ ಮೀನ ತೊಳೆಕತ್ತಾನ್ರೀ... ಕರಿತೀನ್ರಿ, ಧಣಿ ಕುರ್ಚಿಗಿ ಕುಡ್ರಿ' ಅಂತ್ಹೇಳಿ 'ಏಯ್... ಊರನರ್ ಬಂದಾರ ಬಾ...' ಅಂದು ಗಂಡನ ಕರ್ಕೊಂಡು ಮನಿ ಒಳ್ಗ ಬಂದ್ಳು. ಬಂದವರೇ ಇಬ್ರು ಕಾಲಿಗಿ ಬಿದ್ದು ಮೂಲ್ಯಾಗ ಸರ್ದ ಕುಂತ್ರು. 'ಏನಿಲ್ಲ! ಸಾಮವ್ವ. ಗುರಯ್ಯ ಮುತ್ಯಾಗ ಹತ್ಸಾವಿರ ರೂಪಾಯಿ ಬೇಕಾಗ್ಯಾದ ಕವಳಿ ಪಟ್ಟಿ ಬಂದ್ ಮ್ಯಾಲ ಕೊಡ್ತಾರಂತ. ಅದ್ಕ ಕೇಳಾಕ ಬಂದಿವಿ, ನಾವೇನೂ ಬೇವೂರರಲ್ಲ ಮುತ್ಯಾ ಬ್ಯಾರೆ ಚಲೊ ಮನುಷ್ಯಾನ.' ಅದ್ಕ ಸಾಮವ್ವ 'ಏ! ಯಪ್ಪ ಪೂಜಾರಿ ಎಂತ ಮಾತಾಡ್ತಿ, ನೀ ಬ್ಯಾರೆದ್ದಿ. ಮುತ್ಯಾ ಬ್ಯರ್ಯಾನೇನsss ಆದ್ರ ಯಪ್ಪ ಪೂಜಾರಿ ನಾವು ಸಣ್ಣ ಜಾತ್ಯಾರಾಗ್ತಿವಿ, ನಮ್ಗ ಹೊಲಿಲ್ಲ-ಮನಿಲ್ಲ. ನಿಮ್ಮಂತರ ಕೊಟ್ಟ ಬಡ್ಯಾಗ ನಾವು ಬದ್ಕೊರು, ನನ್ನ ಗಂಡ ಊರೊರ್ ಕುಡ್ಕಾನಾ, ನಿಮ್ನ ನಂಬಿ ನಿಮ್ ಉಡೆದಾಗ ರೊಕ್ಕ ಹಾಕ್ತಿನೆಪ್ಪ, ಬ್ಯಾಸಗ್ಯಾಗ ಬಡ್ಡಿ ಕೊಡ್ಬೇಕು ನೋಡ್ರಿಯಪ್ಪ.' 'ಆಯ್ತೇಳಬೆ ರೊಕ್ಕದ ಚಿಂತಿ ಬಿಡು ನೀ' ಎಂದ ನಿಂಗಪ್ಪ ಪೂಜಾರಿ. ಆಗ ಮನ್ಯಾಕ ಎದ್ದೋದ ಸಾಮವ್ವ ಕೆಬ್ಣ ಟ್ರಂಕ್ಯಾನ್ಯಾಗಿಟ್ಟ ರೊಕ್ಕ ತಂದು ಗಂಡನ ಕೈಯಾಗ ಇಟ್ಳು. ಮೊದ್ಲೆ ಹಳಿನೋಟ ಇದ್ದು. ಎಣ್ಸದ್ರಾಗ ಮೂರ್ ನೋಟು ಹರ್ದೆ ಬಿಟ್ವು. ಹಂಗಿಂಗ ಮಾಡಿ ಹತ್ಸಾವಿರ 'ಕಟ್ಟಿಗಿ ರಬ್ಬಟ್' ಹಾಕಿ ಕೊಡಾಕ ಮುಂದಾದ. ಪೂಜಾರಿ, ಗುರಯ್ಯ ಮುತ್ಯಾ ಇಬ್ಬರ ಮುಖ ಪಿಳಿಪಿಳಿ ನೋಡ್ಕತ ಕುಂತ್ರು. ಆಗ ಸಿಟ್ಟಿಲೆ ಕಣ್ಣ್ ಗುಡ್ಡಿ ನೆಟ್ಟಗ ಮಾಡಿ ಸಾಮವ್ವ ಗಂಡಗ 'ಹೆಯ್...! ಖಬ್ರಗೇಡಿ ನಿಸೆದಾಗ ಏನ್ ಮಾಡಕ್ಹತ್ತಿನೀ. ಅಪ್ರಾ್ನ ಮುಡ್ಸಗೊಂಡ್ಗಿ . ರೊಕ್ಕ ಅಲ್ಲಿ ಜಗಲಿ ಮ್ಯಾಲಿಡು ಮುತ್ಯಾ ತೊಗೊತಾರ.' ಅಂದ್ಳು. ಅದ್ಕ ಗುರಯ್ಯ ಮುತ್ಯಾ 'ಇರ್ಲಿ ಬಿಡು ಸಾಮವ್ವ' ಅನುತ್ತ ಜಗಲಿ ಮ್ಯಾಲಿದ್ದ ರೊಕ್ಕ ತೊಗೊಂಡು ಮೆಲ್ಲಕ್ ನಡದ್ರು. ಸಾಮವ್ವ ಗಂಡಗ 'ಕತ್ಲಾಗ್ಯಾದ ಮಗ್ಳು ಯಾವಾಗ್ ಊಟ ಮಾಡ್ಯಾಳ ಏನೋ, ಎರ್ಡ ತತ್ತಿ ಕುದ್ಸಿನಿ ಆಕಿಗೊಂದು ನಿನ್ಗೊಂದು ತಿಂದ ಇಲ್ಲೆ ಬಿಳು, ಅಚಿ ವರ್ಸ ಜಕಾತಿ ಸೌಕಾರ್ಗ ಕೊಟ್ಟ ರೊಕ್ಕದ್ದು ಬಡ್ಡಿನೂ ಇಲ್ಲ! ಗಂಟುನೂ ಇಲ್ಲ. ಪರಸಪ್ಪ ಬ್ಯಾರೆ ಊರಾನ ಸಾಲಿ ಒಲ್ಲೆಂತನಾ, ಊರ್ಬಿಟ್ಟು ಹಾಕಿದ್ರಾಯ್ತು, ಮೊನ್ನಿ ಕಟ್ಟಿಮನಿ ಸಂಗಪ್ಪ ತನ್ ತಮ್ಮ ಮಕ್ಳನಾ ರಂಗಂಪ್ಯಾಟ್ಯಾಗ ಅಂಬೇಡ್ಕರ್ ಸಾಲಿಗಿ ಸೇರ್ಸಿ ಬಂದಾನಂತ ನೋಡು. ಮಗ್ನ ಸಂಜಿಕಿ ಜಲ್ದಿ ರೆಡಿ ಮಾಡ್ಸಿ, ಮುಕ್ಕಾಮ್ ಬಸ್ಸಿಗಿ ಅವ್ರ ಜೊತಿನೆ ಕಳ್ಸಿದ್ರಾಯ್ತು. ನಮ್ಮಂಗ ನಮ್ ಮಕ್ಳ ದಡ್ಡರಾಗೋದು ಬ್ಯಾಡ. ಯಾಕಾ! ಪುಣ್ಯಕ ಮಾವ ಸ್ವತಂತ್ರ ಹೋರಾಟಗಾರ ಅಂತ್ಹೇಳಿ, ಗೌರ್‌ಮೇಂಟ್‌ದು ತಿಂಗ್ಳಾ ಇಷ್ಟು ಪಗಾರ ಹಾಕ್ತಾರಂತ. ಮನಿ ತಿಪ್ಪ ಕಾಣಲ್ಯಾಗದ. ಮುಂದ ಸಣ್ಣಕಿದ ಲಗ್ನಾದ, ದೊಡ್ಡಕ್ಕಿದು ಬಾಣ್ಯಾಂತನ ಅಂತಾದ. ಮುಂಜಾಳೆ ಮಗ್ನ ಕರ್ಕೊಂಡು, ಆಚಿ ಓಣ್ಯಾಂದು ಮಣ್ಣಾಗದ್ರಾಗ ಜಕಾತಿ ಸೌಕಾರನ ಮನ್ಗಿ ಹೋಗಿ ಬಾ..!' ಅನ್ನದ್ರಾಗ ಕರೆಂಟ್ ಹೊದ್ವು ಚಿಮಿಣಿ ಹಚ್ಚಿ ಬಂದು ಸಾಮವ್ವ ಮಗ್ಳು ಭೀಮವ್ವನ ಕರ್ಕೊಂಡು ದೇವ್ರ ಕೊಣ್ಯಾಗ ಮಲ್ಗಿದ್ಳು.

ಮುಂಜ್ಯಾಳೆ ಹಾಸ್ಗ್ಯಾಲಿಂದ ಎದ್ದ ಭೀಮವ್ವ 'ಏನಾಗ್ಯಾದ್ಬೆ ಆಚಿ ಓಣ್ಯಾಗ, ಅಳ್ಳಕತ್ತಾರಲ್ಲ' ಮಗ್ಳ ಮಾತು ಕೇಳಿ ಕೇಳ್ಳರ್ದಂಗ ಸಾಮವ್ವ ಕಾಲಿಗಿ ಜೋಡ್ ಸಿಗ್ಸಿಗೊಂಡು 'ಮಾದ್ರಗೇರ್ಯಾಕ ಹೋಗಿರ್ತಿನಿ' ಅಂತ ಇನ್ನೇನ್ ಹೇಳ್ಬೇಕು ಪರಸಪ್ಪ ಓಡೋಡಿ ಬಂದು, 'ಯವ್ವ! ಜಗದ ಮಲ್ಲವ್ವಮ್ಮ ಸತ್ತಾಳ್ಬೇ'. ಅಂತ್ಹೇಳಿ ಮಂಡಾಳ ಚರ್ಮುರಿ ತಿನ್ನಾಕ ಹ್ವಾದ. ಭೀಮವ್ವ 'ಯವ್ವ ಮಾದ್ರ ಮಲ್ಲವ್ವಕ್ಕ ಸತ್ಳಾ! ಯಾಕ್ಬೇ...? ಏನಾಗಿತ್ತು' ಅದ್ಕ ಸಾಮವ್ವ, 'ಹೆಂಗ್ ಹೇಳ್ಬೇಕವ್ವಾ! ಬಸ್ಟಾಂಡ್ ದಾರಿಗಿ ಇರೋ ಕಿರಾಣಿ ಅಂಗಡ್ಯಾಗ ಯಾವಾಗ್ಲೂ ಕೂಡ್ರಿತಿತ್ತು ನೋಡು ದಪ್ಪನ ಹುಡ್ಗ. ಅವಜಗದ ಮಲ್ಲವ್ವನ ಇಟ್ಟಗೊಂಡಿದ್ನಲ್ಲ ಶರಣಪ್ಪ ಸೌಕಾರ. ಆತ್ನ ಮದ್ವಿ ಹೆಂಡ್ತಿ ಮಗಜಟ್ಟೆಪ್ಪ ಸೌಕಾರ, ಇತsssಈ

